VI. ಇದರಡಿ ನಮೂದಿಸಿರುವವುಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಗೆ ಓದಲಾಯಿತು.

(1) 1907—08ನೆ ಸಾಲಿಗೋಸ್ಕರ ಯೂನಿದ್ರ್ಗಳ ಬಾಬತು ಬಡ್ಜೆಟ್ ಸ್ಯಾಂಕ್ಷನ್ ಆಗಿರುತ್ತೆಂಬ ಬಗ್ಗೆ ತಲಪಿದ 28—10—07ರ ಮುಕ್ಕಂ 3690-1—ಎಲ್. ಬಿ. 98—07-2ನೆ ನಂಬರ್ ಪ್ರೊಸೀಡಿಂಗ್ಸ್.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

(2) ಲೋಕಲ್ ಫಂಡು ಡಿಸ್ಪೆನ್ಸರಿಗಳಿಗೆ ರಿಪೇರಿ ವಗೈರೆ ಆಗತಕ್ಕ ಬಗ್ಗೆ ತಮಾರಾದ ಅಂದಾಜುಗಳನ್ನು ಡಿಸ್ಟ್ರಿಕ್ಟು ಮತ್ತು ಮುನಸಿಪಲ್ ಬೋರ್ಡುಗಳ ಪ್ರೆಸಿಡೆಂಟರವರ ಅಭಿಪ್ರಾಯಕ್ಕು ಮತ್ತು ಕೌಂಟರ್ ಸೈನ್ ಬಗ್ಗು ಕಳುಹಿಸಿಕೊಡತಕ್ಕ ಬಗ್ಗೆ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರುಗಳಿಗೆ ತಿಳುವಳಿಕೆ ಕೊಡಿಸಬೇಕೆಂತ ವಗೈರೆ ಚೀಫ್ ಇಂಜನಿಯರವರಿಗೆ ಸೀನಿಯರ್ ಸರ್ಜನ್ ಸಾಹೇಬರು ಬರಿಸಿರತಕ್ಕ 28—10—07ರ ಮುಕ್ಕಂ 2042ನೆ ನಂಬರು ಲೆಟರು ಸದರಿಯವರ ವೇಲ್ತಂಡ ಮುಕ್ಕಂ ನ 2043-52ನೆ ನಂಬರು ಮೆಮೊ ಸಂಗಡ ತಲಪಿದ್ದನ್ನು ಓದಲಾಯಿತು.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

VII. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸ್ಥಾಪಿಸಿರುವ ಕೋಮಿಯಂ ಕಂಪೆನಿಯವರು ಡಿಸ್ಟ್ರಿಕ್ಟು ಫಂಡ್ ರಸ್ತೆ ಮೇಲೆ ಭಾರಿಯಾದ ಮೆಷಿನೆರಿ ಸಾಮಾನುಗಳನ್ನು ಸಾಗಿಸುವದರಿಂದ ರಸ್ತೆ ಕೆಡುತ್ತೆಂತಲೂ ಇದನ್ನು ಸರಿಯಾದ ಸ್ಥಿತಿಯಲ್ಲಿ ಇಡಿಸಲು ಸದರಿ ಕಂಪೆನಿಯವರಿಂದ ಕಂಟ್ರಬ್ಯೂರ್ಷ ತೆಗದುಕೊಳ್ಳುವ ವಿಚಾರದಲ್ಲಿ ತುಮಕೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರು ಗಾರ್ನಮೆಂಟಿಗೆ ಬರೆಸಿದ 21—10—07ರ ಮುಕ್ಕಂ 31ನೆ ನಂಬರು ಲೆಟರು ಮತ್ತು ಇದರ ಮೂಲಪೂಛಿಗಳ ಕಾಪಿಗಳನ್ನು ಈ ಡಿಸ್ಟ್ರಿಕ್ಟು ಬೋರ್ಡಿನೊಂದಿಗೆ ಆಲೋಚಿಸಿ ಏನು ಕ್ರಮ ಜರಿಗಿಸಬಹುದೆಂಬ ಬಗ್ಗೆ ಜವಾಬು ಅಪೇಕ್ಷಿಸಿ ಜನರಲ್ ಮತ್ತು ರೆವಿನ್ಯು ಸೆಕ್ರಿಟರಿಯವರಿಂದ ತಲಪಿದ 8—11—07ರ ಮುಕ್ಕಂ 4125—ಎಲ್. ಬಿ. 143—07-2ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ. ಗಾರ್ನಮೆಂಟಿಗೆ ತುಮಕೂರು ಡೆಪ್ಯುಟಿ ಕಮಿಷನರವರು ಬರಿಸಿರುವ 21—10—07ರ ಮುಕ್ಕಂ 31ನೆ ನಂಬರ್ ಲೆಟರ್‌ನಲ್ಲಿನ ಅಭಿಪ್ರಾಯಕ್ಕೆ ಈ ಬೋರ್ಡಿನವರು ಒಪ್ಪುತ್ತಾರೆ. ಪ್ರಸಕ್ತವಾದ ರಸ್ತೆಯನ್ನು ಸಾಧಾರಣವಾದ ಆವುದು ರಫ್ತಿಗೆ ಅನುಕೂಲಿಸುವ ಸ್ಥಿತಿಯಲ್ಲಿ ಇಡಲು ಡಿಸ್ಟ್ರಿಕ್ಟು ಫಂಡಿನಿಂದ ಸಾಧ್ಯವಾದಷ್ಟು ಮೊಬಲಗು ಖರ್ಚುಮಾಡಲು ವಿಶೇಷ ಪ್ರಯತ್ನ ಪಡುತ್ತಿರುವದರಿಂದ ಕೋಮಿಯಂ ಕಂಪನಿಯವರ ಬಹಳವಾದ ಆವುದು ರಫ್ತಿನನುಸಾರವಾಗಿ ರಸ್ತೆಯನ್ನು ಸರಿಪಡಿಸಲು ಡಿಸ್ಟ್ರಿಕ್ಟು ಫಂಡಿನಲ್ಲಿ ಹಣವಿಲ್ಲದ್ದರಿಂದ ಪ್ರಸಕ್ತವಾದ ಕೆಲಸಕ್ಕೆ ಹೆಚ್ಚಾಗಿ ಬೇಕಾಗುವ ಮೊಬಲಗು ಮೇಲ್ಕಂಡ ಕಂಪನಿಯಿಂದ ಕಂಟ್ರಬ್ಯೂರ್ಷ ತರೀಖಾಗಿ ವಸೂಲಿನಿಂದಲಾಗಲಿ ಅಥವಾ ಇತರ ಬಾಬಿನ ಹಣದಿಂದಲಾಗಲಿ ವದಗಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

VIII. ಇದರಡಿ ನಮೂದಿಸಿರುವ ಮೆಂಬರುಗಳು ಮೀಟಿಂಗಿಗೆ ಹಾಜರಾಗಲು ಅನುಕೂಲವಿಲ್ಲವೆಂಬ ಬಗ್ಗೆ ಬರೆಸಿದ ಲೇಖನಗಳನ್ನು ಓದಲಾಯಿತು.

1. ಮಿ|| ಡಬ್ಲ್ಯು. ಎಲ್. ಕ್ಯಾಫರ್ಡ್ ಸಾಹೇಬರವರು.
2. ,, ಐಗೂರು ಮಲ್ಲೇಗೌಡರು.
3. ,, ಪುಟ್ಟೇಗೌಡರು.
4. ,, ರಾಮಕೆಟ್ಟರು.

ತೀರ್ಮಾನ.—ಕೇಳಿ ವಿಲೆ ಇಡಿಸಲಾಯಿತು.

IX. ಬರುವ ಮೀಟಿಂಗನ್ನು 1908ನೆ ಇಸವಿ ಫೆಬ್ರವರಿ 8ನೆ ತಾರೀಖಿಗೆಂತ ತೀರ್ಮಾನಿಸಲಾಯಿತು.

ಕೆ. ಆರ್. ಶ್ರೀನಿವಾಸ್ಯೆಯ್ಯಂಗಾರ್,
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

1907ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 28ರಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್‌ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗದ ಮೆಂಬರುಗಳು.

1. ಮಿ|| ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್, ಮತ್ತು ಪ್ರೆಸಿಡೆಂಟ್.
2. ,, ಆರ್. ಟಿ. ಮುಕದೇವರಾವ್, ಅಸಿಸ್ಟೆಂಟ್ ಕಮಿಷನರ್ ಶಿವಮೊಗ್ಗ ಡಿವಿಜ್.
3. ,, ಎ. ವೇದಾಂತದೇಶಿಗಂ ಅಯ್ಯಂಗಾರ್, ಟ್ರೆಜರ ಅಸಿಸ್ಟೆಂಟ್ ಕಮಿಷನರ್ ಮತ್ತು ವೈಸ್ ಪ್ರೆಸಿಡೆಂಟ್.
4. ,, ಮಹಮ್ಮದ್ ಉಸ್ಮಾನ್ ಸಾಹೇಬರವರ, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್.
5. ,, ಬಿ. ರಾಮಯ್ಯ, ಅಕೌಂಟಿಯಟಿಂಗ್ ಡೆಪ್ಯುಟಿ ಆಡಿಟರ್.

ಉದ್ಯೋಗಸ್ಥರಲ್ಲದ ಮೆಂಬರುಗಳು.

6. ಮಿ|| ನಾಡಿಗಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
7. ,, ಹಾಗರ್ತಿ ದ್ಯಾವಪ್ಪನವರು, ತೀರ್ಥಹಳ್ಳಿ ತಾಲ್ಲೂಕು.

8. ಮಿ|| ಎ. ನರಸಿಂಹಯ್ಯಂಗಾರ್, ಸಾಗರ ತಾಲ್ಲೂಕು.
9. ,, ಸಿ. ನಾಗಪ್ಪನವರು, ನಗರದ ತಾಲ್ಲೂಕು.

ಇತರ ಮೆಂಬರುಗಳು.

10. ,, ರೆವರೆಂಡ್ ಎ. ಇ. ನ್ಯೆಟಿಂಗೇಲ್ ಸಾಹೇಬರವರು.
11. ,, ರೆವರೆಂಡ್ ಫಾದರ್ ಎಫ್. ಪಾಲ್ನೆ ಸಾಹೇಬರವರು.
12. ,, ಮರೀದೇವರ ಗುರುಸಿದ್ದಪ್ಪ, ಹೊನ್ನಾಳಿ ತಾಲ್ಲೂಕು.
13. ,, ವೀರಪ್ಪ, ಶಿಕಾರಿಪುರ ಗೈರ್‌ಹಾಜರ್.

ಉದ್ಯೋಗದ ಮೆಂಬರುಗಳು.

1. ಶಿವಮೊಗ್ಗ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರು.
2. ಸಾಗರ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.
3. ಹೊನ್ನಾಳಿ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.

ಉದ್ಯೋಗಸ್ಥರಲ್ಲದ ಮೆಂಬರುಗಳು.

4. ಮೆ|| ನಾಡಿಗ್ ಶೇಷಾದ್ರಾವ್ಪ್ಪನವರು, ಶಿವಮೊಗ್ಗ ತಾಲ್ಲೂಕು (ಛತ್ರಿ).
5. ,, ಲಾಡಿ ಅಬ್ದುಲ್ ಕರೀಂಸಾಹೇಬರವರು, ಕುಂಸಿ ಸರ್ಕಲ್ ತಾಲ್ಲೂಕು.
6. ,, ಹೋಗೆಗೆ ಅಡವೆಪ್ಪನವರು, ಚನ್ನಗಿರಿ.
7. ,, ಹೊಸಬಾಳೆ ತಿಮ್ಮಪ್ಪ, ಸೊರಬ.
8. ,, ಎ. ಲಕ್ಷ್ಮೀನಾರಣಪ್ಪ, ತೀರ್ಥಹಳ್ಳಿ.
9. ,, ಟಿ. ಭೀಮರಾವ್, ಶಿವಮೊಗ್ಗ.
10. ,, ಸೈಯದ್ ಖಾಜೆಮಹಮ್ಮದ್, ಶಿವಮೊಗ್ಗ.
11. ,, ಕೋರಿ ಹಿರಣ್ಯಪ್ಪ, ಸಾಗರ.
12. ,, ರಟ್ಟೆಹಳ್ಳಿ ಪುಟ್ಟಪ್ಪ, ಸಾಗರ.

1. ಡಿಸ್ಪೆನ್ಸರಿ ಫಂಡು ಬಾಬಿನ 1907ನೆ ಏಪ್ರೆಲ್, ಮತ್ತು ಮೇ ತಿಂಗಳು ಜಮಾ ಖರ್ಚು ಲೆಕ್ಕ ಕಂಟ್ರೋಲರವರಿಂದ ಆಡಿಟ್ಟಾಗಿ ಬಂದದ್ದನ್ನು ಓದಿ, ಇದನ್ನು ವಿಲೆ ಇಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಈ ಲೆಕ್ಕದ ಸಾರಾಂಶದ ತಪಶೀಲ್:—

		ಜಮಾ. ರೂ.	ಆ.	ಪೈ.	ಖರ್ಚು. ರೂ.	ಆ.	ಪೈ.
ತಾರೀಖು 1—4—07 ರಲ್ಲಿ ಶಿಲ್ಕು	...	48,072	15	10	...		
ಏಪ್ರೆಲ್ ...	...	6,649	6	9	4,482	5	1
ಮೇ ...	...	6,571	9	4	4,645	5	6
ತಾರೀಖು 3—5—07ರಲ್ಲಿ ಶಿಲ್ಕು	...	...			52,166	5	2
ಜುಮ್ಲಾ		61,293	15	11	61,293	15	11

2. 1906—07ನೆ ಸಾಲ್ ಡಿಸ್ಪೆನ್ಸರಿ ಫಂಡು ಬಾಬಿನ ಆಡಳಿತ ಸಮ್ಬಂಧವಾದ ರಿಪೋರ್ಟು ಮತ್ತು ಆ ಸಾಲಿನ ಒಟ್ಟು ಜಮಾ ಖರ್ಚು ಬಗೈರಾಗಿ ಗವರ್ನ್‌ಮೆಂಟಿಗೆ ರಿಪೋರ್ಟನ್ನು ರವಾನಿಸಬಹುದೆಂತ ತೀರ್ಮಾನಿಸಲಾಯಿತು. ಈ ಸಾಲ್ ಪುರುವಿನಲ್ಲಿ 29,694 ರೂಪಾಯಿಗಳು ಶಿಲ್ಕು ಇದ್ದು 89,700 ರೂಪಾಯಿಗಳು ಜಮಾ ಆಗಿ 88,193 ರೂಪಾಯಿ ಖರ್ಚು ಆಗಿ ಸಾಲ್ ಆಖೈರಿಗೆ 31,201 ರೂಪಾಯಿ ಶಿಲ್ಕು ನಿಂತಿರುವದಾಗಿ ರಿಮ್ಹಾರ್ಕ್ಸ್‌ನಿಂದ ತಿಳಿಯಬಂತು.

3. ಗವರ್ನ್‌ಮೆಂಟಿನಿಂದ ಸಾದರಾದ ನಂಬರು 1378—98, 93—06—8, ತಾ|| 10—8—07ನೆ ಪ್ರೊಸೀಡಿಂಗ್ಸ್‌ನಲ್ಲಿ ಪ್ರಜಾರೋಗ್ಯ ಸಮ್ಬಂಧದ ಇಲ್ತಾಖೆ ವಿಷಾಡು ಮಂಜೂರಾಗಿರುವದರಲ್ಲಿ ಡಿ ಸ್ಯಾನಿಟೆರಿ ಬೋರ್ಡು ವಿಷಾಡು ಆಗಿ ಅವರು ಚಲಾಯಿಸಬೇಕಾದ ಅಧಿಕಾರ ಮತ್ತು ಅವರ ಅಧಿಕಾರಕ್ಕೆ ಬಳಪಡತಕ್ಕ ಹಣವಿನ ವಿಷಯದಲ್ಲಿ ಸಹಾ ಸಲಹೆಗಳನ್ನು ಕಳುಹಿಸಿಕೊಡಬೇಕಾಗಿ ಸ್ಯಾನಿಟೆರಿ ಕಮಿಷನರ್ ಸಾಹೇಬರವರು ಬರೆದ ನಂಬರು 639—4 ತಾ|| 26—8—07ನೆ ಸರ್ಕ್ಯುಲರ್ ಓದಲಾಯಿತು. ಡಿಸ್ಪೆನ್ಸರಿ ಸ್ಯಾನಿಟೆರಿ ಬೋರ್ಡು ವಿಷಾಡನ್ನು ಮೇಲ್ಕಂಡ ಗವರ್ನ್‌ಮೆಂಟ್ ಆರ್ಡರಿನಲ್ಲಿಯೇ ವಂಜೂರು ಮಾಡಿರುವ ಕಾರಣ ಡಿಸ್ಪೆನ್ಸರಿ ಬೋರ್ಡಿನವರು ಜಾಸ್ತಿ ಏನೂ ಹೇಳತಕ್ಕದ್ದು ಇಲ್ಲ. ಡಿಸ್ಪೆನ್ಸರಿ ಸ್ಯಾನಿಟೆರಿ ಬೋರ್ಡಿನವರಿಗೆ ಕೊಡತಕ್ಕ ಅಧಿಕಾರ ಮತ್ತು ಅವರು ಮಾಡತಕ್ಕ ಕೆಲಸಗಳ ವಿಷಯದಲ್ಲಿ ಲೋಕಲ್ ಬೋರ್ಡು ರೂಲ್ಸು ಪ್ರಕಾರ ಡಿಸ್ಪೆನ್ಸರಿ ಬೋರ್ಡಿನವರಿಗೆ ಇರುವ ಅಧಿಕಾರ ಬದಲಾವಣೆಯ ನ್ಯೂನತೆ ಯಾವ ಭಾಗದಲ್ಲಿಯೂ ಆಗಕೂಡದು. ಆರೋಗ್ಯ ಸಮ್ಬಂಧವಾದ ಕಾಂಗಾರಿಗಳ ಬಾಬು 100 ರೂಪಾಯಿಗಳಿಗೆ ಮೇಲ್ಪಟ್ಟ ಅಂದಾಜಾಗಳು ಡಿಸ್ಪೆನ್ಸರಿ ಸ್ಯಾನಿಟೆರಿ ಬೋರ್ಡಿನವರ ಅಭಿಪ್ರಾಯದ ಬಗ್ಗೆ ಡಿಸ್ಪೆನ್ಸರಿ ಬೋರ್ಡಿನಿಂದ ಕಳುಹಿಸಲ್ಪಡುತ್ತೆ. ಡಿಸ್ಪೆನ್ಸರಿ ಸ್ಯಾನಿಟೆರಿ ಬೋರ್ಡಿನವರಿಗೆ ಈ ಕಾಮಗಾರಿಗಳನ್ನು ಮಂಜೂರ್ ಮಾಡುವದಕ್ಕಾಗಲಿ ಅಥವಾ ಕೆಲಸ ನಡಿಸುವದಕ್ಕಾಗಲಿ ಸ್ವತಂತ್ರ ಅಧಿಕಾರ ಯಾವದೂ ಇರುವದಿಲ್ಲ. ಸಾಂಕ್ರಾಮಿಕ ರೋಗವು ವ್ಯಾಪ್ತವಾದಾಗ ಪ್ರಜಾ ಕ್ಷೇಮಕ್ಕೋಸ್ಕರವಾಗಿ ಎರಡು ಬೋರ್ಡಿನವರು ವಗ್ಗಟ್ಟಾಗಿ ವಿಷಾಡು ಮಾಡುವದಲ್ಲದೆ ಆಗ್ಯೆ ವದಗಬಹುದಾದ ಖರ್ಚು ವೆಚ್ಚಗಳನ್ನು ಮತ್ತು ಕಾಂಗಾರಿಗಳನ್ನು ಡಿಸ್ಪೆನ್ಸರಿ ಸ್ಯಾನಿಟೆರಿ ಬೋರ್ಡಿನವರು ಚಲಾಯಿಸತಕ್ಕದ್ದು ಎಂತ ತೀರ್ಮಾನಿಸಲಾಯಿತು.

4. ಆಗುಂಬೆ ಟೋಲ್‌ಗೇಟ್ ಬಳಿ ಭಾವಿ ತೆಗಿಸತಕ್ಕ ಬಾಬತು ಲಾಗುವಡು ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಚರ್ಚಿಸಿ ಆಗುವ ತೀರ್ಮಾನವನ್ನು ಕಳುಹಿಸಿಕೊಡಬೇಕಾಗಿ ಗಾರ್ನಮೆಂಟಿನಿಂದ ಸಾದರಾದ 6-8-07ನೆ ಮಕ್ಕಂ ನಂಬರು 1090-1 4-07-2ನೆ ಪ್ರೊಸೀಡಿಂಗ್ಸು ಓದಲಾಗಿ ಪ್ರಯಾಣೀಕರು ಟೋಲ್ ಗೇಟ್ ಬಳಿ ಇಳದುಕೊಳ್ಳದೆ ಆಗುಂಬೆಯಲ್ಲಿರುವ ಛತ್ರ ಅಥವಾ ಮುನಾಫರ್‌ಖಾನೆಗೆ ಬಂದು ಇಳಿಕೊಳ್ಳುವದರಿಂದ ಟೋಲ್ ಗೇಟ್ ಬಳಿ ತೆಗಿಯುವ ಭಾವಿಯಿಂದ ಪ್ರಯಾಣೀಕರಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲವೆಂತಲೂ ಈ ಕಾರಣದಿಂದ ಈ ಬಗ್ಗೆ ತಗಲುವ ಖರ್ಚು ಪೈಕಿ ಬಂದು ಭಾಗವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಸುಮಸಲು ಕಾರಣವಿಲ್ಲವೆಂತ ಪಕವಾಕ್ಯತೆಯಿಂದ ತೀರ್ಮಾನಿಸಲಾಯಿತು.

5. ಚೆನ್ನಗಿರಿ ತಾಲ್ಲೂಕು ಹೊಸೂರಿನಿಂದ ದಾವಣಗೆರೆ ತಾಲ್ಲೂಕು ಹದಡಿಗೆ ತಯಾರಾಗುವ ರಸ್ತೆ ಬಗ್ಗೆ ಚಾಲ್ತಿ ಸಾಲಿಗೆ 3,000 ರೂಪಾಯಿಗಳನ್ನು ಹೆಚ್ಚಾಗಿ ಕೊಡಿಸಬೇಕೆಂತ ಶಿವಮೊಗ್ಗಾ ಡಿವಿ ಎಗ್ಜಿಕ್ಯೂಟಿವ್ ಇಂಜನಿಯರವರು ಬರಸಿದ ನಂಬರು 955ನೆ ಡಾಕೆಟ್ ಓದಲಾಗಿ ಈ ಕಾಂಗಾರಿಯು ಪ್ರಾರೈಸಿರುವದಾಗಿ ತಿಳಿಯಬರುವದರಿಂದ ಚಾಲ್ತಿ ಸಾಲ್ಗೆ ಡಿಸ್ಟ್ರಿಕ್ಟ್ ಫಂಡು ಶಿಲ್ಕು ಪೈಕಿ 3,000 ರೂಪಾಯಿಗಳನ್ನು ಕೊಡತಕ್ಕ ಬಗ್ಗೆ ಗಾರ್ನಮೆಂಟಿಗೆ ಬರಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

6. ಮೇಲ್ಲಂಡೆ ಹೊಸೂರು ಹದಡಿ ರಸ್ತೆ ಸಾಲಾಬಾದ್ ಕಾಂಗಾರಿ ಬಗ್ಗೆ 400 ರೂಪಾಯಿ ಅಂದಾಜಾ ಮಂಜೂರಿ ಬಗ್ಗೆ ಕಳುಹಿಸಿ ಇರುವದಾಗಿ ಎಗ್ಜಿಕ್ಯೂಟಿವ್ ಇಂಜಿನಿಯರ್‌ವರು ಬರಸಿದ್ದ ನಂಬರು 886ನೆ ಡಾಕೇಟ್ ಓದಲಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯವರ ಖರ್ಚಿಗೋಸ್ಕರ ಇಟ್ಟಿರುವ ಹಣದ ಪೈಕಿ ಈ ಕಾಂಗಾರಿ ಬಗ್ಗೆ ಹಣವನ್ನು ನಗದಾವರ್ಗಿಯಿಂದ ಉಪಯೋಗಿಸಿಕೊಳ್ಳಲೂ ಎಗ್ಜಿಕ್ಯೂಟಿವ್ ಇಂಜಿನಿಯರವರಿಗೆ ತಿಳಿಸತಕ್ಕದೆಂತ ತೀರ್ಮಾನಿಸಲಾಯಿತು.

7. ಹುಲಿಕಲ್ ಮುನಾಫರ್‌ಖಾನೆ ರಿಪೇರಿ ಬಗ್ಗೆ 678 ರೂಪಾಯಿಗಳು ತಾಜಾ ಅಂದಾಜಾ ತಯಾರ್‌ಮಾಡಿ ಕಳುಹಿಸಿ ಇರುವದಾಗಿ ಬರಸಿದ ಎಗ್ಜಿಕ್ಯೂಟಿವ್ ಇಂಜಿನಿಯರ್‌ವರ ನಂಬರು 919ನೆ ಡಾಕೆಟ್ ಓದಲಾಗಿ ಈ ಅಂದಾಜಾವನ್ನು ಬೋರ್ಡಿನವರು ಒಪ್ಪಿರುವದರಿಂದ ಗಾರ್ನಮೆಂಟ್ ಮಂಜೂರಿ ಬಗ್ಗೆ ಕಳುಹಿಸಿಕೊಟ್ಟು ಚಾಲ್ತಿ ಸಾಲ್ ಈ ಬಗ್ಗೆ ಇರುವ ಹಣದ ಪೈಕಿ 200 ರೂಪಾಯಿ ಖರ್ಚಿನ ಬಗ್ಗೆ ಕೊಡತಕ್ಕದ್ದೆಂತ ತೀರ್ಮಾನಿಸಲಾಯಿತು.

8. ತುಪ್ಪೂರು ಭಾವಿ ಬಾಬತು 766 ರೂಪಾಯಿನ ರಿವೈಜ್ ಅಂದಾಜಾ ತಯಾರ್‌ಮಾಡಿ ಕಳುಹಿಸಿರುವದಾಗಿ ಎಗ್ಜಿಕ್ಯೂಟಿವ್ ಇಂಜಿನಿಯರ್‌ವರು ಬರಸಿದ ನಂಬರು 549ನೆ ಡಾಕೆಟ್ ಓದಲಾಗಿ ಈ ವಿಷಯ ಬರುವ ಮೀಟಿಂಗ್‌ವರೆಗೆ ಅವಸನತ್ತು ಇರತಕ್ಕದ್ದೆಂತ ತೀರ್ಮಾನಿಸಲಾಯಿತು.

9. ಅನಂತಪುರದ ಮುನಾಫರ್‌ಖಾನೆ ಛಾವಡಿ ತಲಬು 2 ರೂಪಾಯಿನಿಂದ 5 ರೂಪಾಯಿಗೆ ಹೆಚ್ಚಿಸಬೇಕಾಗಿ ನಾಗರ ಸಬ್ ಡಿವೀರ್ಜ ಅಸಿಸ್ಟೆಂಟ್ ಕಮಿಷನರವರು ಬರಸಿದ ನಂಬರು 194ನೆ ಯಾದಿ ಓದಲಾಗಿ ಹೆಚ್ಚಿದ ದರ ತಲಬು ಬರುವ ಸಾಲಿಬ ಜೆಜ್ಜಿಟ್ಟನಲ್ಲಿ ದಾಖಲ್ ಮಾಡತಕ್ಕದ್ದೆಂತಲೂ ಸದ್ಯಕ್ಕೆ ವಜಂತನ ಮತಪ ರಖವಾರಿ ಅನಂತಪುರದ ಮುನಾಫರಿಖಾನೆಯ ಛಾವಡಿ ಕೆಲಸವನ್ನು ಮಾಡತಕ್ಕದ್ದೆಂತಲೂ ಈ ಬಗ್ಗೆ 2 ರೂಪಾಯಿ ಅಲಾವನ್ಸು ಕೊಡತಕ ದೆಂತಲೂ ತೀರ್ಮಾನಿಸಲಾಯಿತು.

10. ತಾಳಗುಪ್ಪೆಯಲ್ಲಿ ತೆಗಿಯುವ ಭಾವಿ ಕಾಂಗಾರಿ ಬಗ್ಗೆ 40 ರೂಪಾಯಿ ಅಂದಾಜಾ ಕಳುಹಿಸಿರುವದಾಗಿ ಬರಸಿದ ನಂಬರು 153ನೆ ಯಾದಿ ಓದಿ ಈ ರಿವೈಜ್ ಅಂದಾಜಾ ಣ ಇಲ್ಲದ್ದರಿಂದ ತಮೋನತ್ತು ಮಾಡತಕ್ಕದ್ದೆಂತಲೂ ಈ ಕಾಂಗಾರಿ ಬಗ್ಗೆ ಇಕಂಪ್ಲೀಟ್ ಕಾಂಗಾರಿ ಲೀಸ್ಟಿನಲ್ಲಿ ಸೇರಿರುವ 50 ರೂಪಾಯಿಗಳನ್ನು ನಡದು ಇರುವ ಕಾಂಗಾರಿ ಬಗ್ಗೆ ಪಾವತಿ ಮಾಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

11. ಅನಂತಪುರದಲ್ಲಿ ದೊಡ್ಡಿ ಮನೆ ಕಟ್ಟತಕ್ಕ ಬಗ್ಗೆ 300 ರೂಪಾಯಿಗಳ ಅಂದಾಜಾ ಕಳುಹಿಸಿ ಇರುವದಾಗಿ ಬರಸಿರುವ ನಾಗರ ಸಬ್ ಡಿವೀರ್ಜ ಅಸಿಸ್ಟೆಂಟ್ ಕಮಿಷನರವರ ನಂಬರು 197ನೆ ಯಾದಿ ಓದಿ ಅಂದಾಜಾ ಮಂಜೂರು ಮಾಡಿ ಚಾಲ್ತಿ ಸಾಲ್ ಹೊಸಕಾಂಗಾರಿ ಬಗ್ಗೆ ಇರತಕ್ಕ ಹಣವಿನ ಪೈಕಿ 150 ರೂಪಾಯಿಗಳನ್ನು ಉಪಯೋಗಿಸಿಕೊಳ್ಳತಕ್ಕದ್ದೆಂತ ತೀರ್ಮಾನಿಸಲಾಯಿತು.

12. ಸೊರಬ ತಾಲ್ಲೂಕು ಉಳವಿ, ಬಿಳಗಲಿ, ಜಡೆ ಗ್ರಾಮಗಳ ದೊಡ್ಡಿ ಮನೆ ತಯಾರಿ ಬಗ್ಗೆ 160 ರೂಪಾಯಿಗಳ ಬಾಬತು 3 ಅಂದಾಜಾ ಕಳುಹಿಸಿ ಇರುವದಾಗಿ ಬರಸಿದ ನಾಗರ ಸಬ್ ಡಿವೀರ್ಜ ಅಸಿಸ್ಟೆಂಟ್ ಕಮಿಷನರವರ ನಂಬರು 290-292-293ನೆ ಯಾದಿ ಓದಲಾಗಿ ಈ ಅಂದಾಜಾಗಳು ಹಣ ಇಲ್ಲದ್ದರಿಂದ ಸದ್ಯಕ್ಕೆ ಅವಸನತ್ತು ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

13. ಸೊಗಿಲ ಗ್ರಾಮದಲ್ಲಿ ದೊಡ್ಡಿಮನೆ ಕಟ್ಟತಕ್ಕ ಬಗ್ಗೆ 180 ರೂಪಾಯಿನ ಅಂದಾಜಾ ಕಳುಹಿಸಿ ಇರುವದಾಗಿ ಬರಸಿದ ನಂಬರು 464ನೆ ಯಾದಿ ಓದಲಾಗಿ ಈ ಅಂದಾಜಾ ಮಂಜೂರು ಮಾಡಿ ಚಾಲ್ತಿ ಸಾಲ್ ದೊಡ್ಡಿ ಕಟ್ಟಡಗಳ ಬಗ್ಗೆ ಮಂಜೂರು ಆಗಿರುವ ಹಣಗಳ ಪೈಕಿ 10 ರೂಪಾಯಿಗಳನ್ನು ಈ ಬಗ್ಗೆ ಉಪಯೋಗಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

14. ಶಿವಮೊಗ್ಗಾ ಎಡಿಹಳ್ಳಿ ರಸ್ತೆ ಸ್ಪೆಷಲ್ ರಿಪೇರಿ ಬಗ್ಗೆ 4,441 ರೂಪಾಯಿನ ಅಂದಾಜಾ ಕಾಂಪ್ರಸೈಕ್ ಬಗ್ಗೆ ಕಳುಹಿಸಿರುವದಾಗಿ ಎಗ್ಜಿಕ್ಯೂಟಿವ್ ಇಂಜಿನಿಯರವರು ಬರಸಿದ ನಂಬರ್ 952ನೆ ಡಾಕೆಟ್ ಓದಿ ಈ ಅಂದಾಜಾವನ್ನು ಕಾಂಟ್ರಸೈಕ್ ಮಾಡಿ ಕಳುಹಿಸಬಹುದೆಂದು ತೀರ್ಮಾನವಾಯಿತು.

15. ದಸರಾ ರೆಪ್ರಜೆಂಟೇಟಿವ್ ಪೆಂಡಾರುಗಳ ಡಿಸ್ಟ್ರಿಕ್ಟ್ ಫಂಡ್ ಕಾಂಗಾರಿಗಳ ವಿಷಯಲ್ಲಿ ಮಾಡಿದ ಸಲಹೆಗಳ ಬಾಬತು ಎಕಸ್ಪ್ರಿಕ್ಟ್‌ಗಳನ್ನು ಫೈಸಲ್ ಬಗ್ಗೆ ಕಳುಹಿಸಿರುವದಾಗಿ ಡೆಪ್ಯುಟಿ ಕಮಿಷನರವರು ಬರಸಿದ ನಂಬರ್ 1,251ನೆ ಡಾಕೆಟ್ ಓದಿ ಈ ವಿಷಯವು ಬರುವ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್‌ವರೆಗೆ ಅವಸನತ್ತು ಇಡತಕ್ಕದ್ದೆಂತ ತೀರ್ಮಾನವಾಯಿತು.

16. ಬೋರ್ಡಿನವರ ಮಂಜೂರಿಗೆ ಒಳಪಡ್ಡ ಇಸ್ಪೆಕ್ಟರವರು ಮಂಜೂರು ಮಾಡಿರುವ ಕಾಂಗಾರಿಗಳ ತಪಸೀಲ್ ಲೀಸ್ತು ಓದಿ ಇದನ್ನು ಒಪ್ಪಿರುವದಾಗಿ ತೀರ್ಮಾನಿಸಲಾಯಿತು.

ಕಾಂಗಾರಿ ಹೆಸರು.	ಮೊಬಲಗು.
ಸಾಗರ-ಕೆಳದಿ ರಸ್ತೆ ರಿಪೇರಿ	70 ರೂ.

17. ಬೋರ್ಡಿನವರ ಒಪ್ಪುಗೆಗೆ ವಳಪಟ್ಟ ಪ್ರೆಸಿಡೆಂಟರವರು ಕಾರ್ಟರಿಸ್ಯೆ ಮಾಡಿ ಕಳುಹಿಸಿಕೊಟ್ಟು ಇರುವ ಅಂದಾಜಾ ತಪಶೀಲ್ ಲೀಸ್ಟು ಓದಿ ಇದನ್ನು ಮಂಜೂರು ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

ಕಾಂಗಾರಿ ಹೆಸರು.	ಮೊಬಲಗು.
ಅನಂತಪುರ-ತೀರ್ಥಹಳ್ಳಿ ಸ್ಪೆಷಲ್ ರಿಪೇರಿ	809 ರೂ.

ಈ ಕೆಳಗೆ ನಮೂದಾಗುವ ದಾಖಲೆಗಳನ್ನು ಓದಿ ಏಲೆ ಇಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

1. ಟೋಲ್‌ಗೇಟಿಗೆ ಸಮೀಪ ಇರತಕ್ಕ ಜಿರಾಯಿತು ಕಸಬುದಾರರು ಅಥವಾ ಇತರರು ತಮ್ಮ ಬಾಬತು ಗಾಡಿಗಳು ಟೋಲ್ ಗೇಟಿನಲ್ಲಿ ಹೋಗಿ ಬರುವ ಸಂದರ್ಭದಲ್ಲಿ ಈ ಬಗ್ಗೆ ಕೊಡುವ ಟೋಲಿನ ಬಗ್ಗೆ ರಾಜಿ ಮಾಡಿಕೊಳ್ಳಬಹುದೆಂತ ಆಗಿರುವ ಗೌರ್ಮೆಂಟ್ ನಂಬರ್ 1369—76 L. B. 81-05-16ನೆ ಪ್ರೊಸೀಡಿಂಗ್ಸ್.

2. ಹೊಸದಾಗಿ ಮೊಳರೂರು ಆಗತಕ್ಕ ಮೆಂಬರುಗಳ ವಿಷಯದಲ್ಲಿ ಜೂಲೈ ಗುರ್ಯೇ ತಾರೀಖಿನಲ್ಲಿಯೇ ಫಾಯಿಷ್ ಆಗಲು ಏರ್ಪಾಡು ಇಡಬೇಕಾಗಿ ಸಾದರಾಗಿರುವ ಗೌರ್ಮೆಂಟ್ ನಂಬರ್ 1255—63—L. B. 90-06-10ನೆ ಪ್ರೊಸೀಡಿಂಗ್ಸ್.

3. ಮ್ಯುನಿಸಿಪಲ್ ಅಥವಾ ಡಿಸ್ಟ್ರಿಕ್ಟ್ ಬೋರ್ಡ್ ಬಾಬತು ಶಿಲ್ಕು ಮೊಬಲಗು ಏನು ಇಲ್ಲದೆ ಇದ್ದ ಇಂಥಾ ಮೊಬಲಗು ಬಂದು ತಿಂಗಳಿಗೆ ಮೇಲ್ಪಟ್ಟು ಛರ್ತಿ ಆಗದೆ ಬಾಕೀಲಿ ಬರುವ ಪಕ್ಷಕ್ಕೆ 1908—09ನೆ ಸಾಲ್ ಪುರುವಿನಿಂದ ಶೇಕಡಾ ಸಾಲೀಯಾನ 4 ರೂಪಾಯಿ ಪ್ರಕಾರ ಬಡ್ಡಿ ದಾಖಲ್ಮಾಡುವದಾಗಿ ಸಾದರಾಗಿರುವ ಗೌರ್ಮೆಂಟ್ ನಂಬರ್ 1000-9—7-8-07ನೆ ಪ್ರೊಸೀಡಿಂಗ್ಸ್.

4. ಅಮೃತಪುಹಲ್ ಬೀಜದ ಹೋರಿಗಳ ಸಪ್ಲೈ ವಿಷಯದಲ್ಲಿ ಗೌರ್ಮೆಂಟಿನಿಂದ ಸಾದರಾಗಿರುವ ನಂಬರು 2311—9—L. B. 255—06-2ನೆ ಪ್ರೊಸೀಡಿಂಗ್ಸ್.

5. ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ದನಗಳ ಪ್ರದರ್ಶನಕಾಲದಲ್ಲಿ ಕೊಡತಕ್ಕ ಬಹುಮಾನದ ಮೊಬಲಗು 200 ರೂಪಾಯಿಗಳಿಗೆ ಹೆಚ್ಚಿಸುವದನ್ನು ಮಂಜೂರು ಮಾಡಿರುವದಾಗಿ ಗೌರ್ಮೆಂಟ್ ನಂಬರ್ 585-95ನೆ ಪ್ರೊಸೀಡಿಂಗ್ಸ್.

ಬರುವ ಮೀಟಿಂಗ್ ತಾರೀಖು 9—12—07ರಲ್ಲಿ ನಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು ನೆ ನವಂಬರ್ 1907

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಳಕೆರೆ ತಾಲ್ಲೂಕು ಮಿರಾಸಾಬಿಹಳ್ಳಿ ಬಿ. ಹೊಸದಾಗಿ ಕಟ್ಟು ಇರುವ ರಾಂತಲಾವಿಕೆರೆ ಅಚ್ಚುಕಟ್ಟಿಗೆ ಕೇರಿ ಇರುವ ಜಮೀನುಗಳ ಹಿಡುವಳಿ ಹಕ್ಕನ್ನು ವಿಸಿರಾಸಾಬಿಹಳ್ಳಿ ಬಿ. ಸ್ಯ 1908ನೆ ಇಸವಿ ಜನವರಿ ತಾರೀಖು 6ನೆ ಸೋಮವಾರದ ದಿನ ಮತ್ತು ಮರು ದಿವಸಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆ ಎಂಬುದಾಗಿ ಈ ಮೂಲಕ ನೋಟೀಸನ್ನು ಕೊಟ್ಟಿರುತ್ತೆ.

ಜಾಸ್ತಿ ತಪಶೀಲುಗಳನ್ನು ಸ್ಯ 1907ನೆ ಮರ್ಕುಂ ನವಂಬರು ತಾರೀಖು 28ನೆ ಗೆಜೆಟ್ಟಿನ IIನೆ ಭಾಗದ 554—555—556ನೆ ಪಾನುಗಳನ್ನು ನೋಡಿಕೊಳ್ಳಬೇಕು.

ತಾರೀಖು 4ನೆ ಡಿಸೆಂಬರು 1907.

ಸ್ಯ 1907ನೆ ಇಸವಿ ನವಂಬರು 28ನೆ ತಾರೀಖಿನ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 556ನೆ ಪುಟದಲ್ಲಿ ಛಾಯಿಷ್ ಆಗಿರುವ ತಾರೀಖು 19—11—1907ನೆ ಮರ್ಕುಂಮಿನ ಹರಾಜು ಷರತ್ತು 6ನೆ ಪ್ಯಾರಾದಲ್ಲಿ "ಶೇಕಡಾ 25 ನ್ನು" ಎಂಬ ಶಬ್ದಗಳ ತರುವಾಯ ಮತ್ತು 8ನೆ ಪ್ಯಾರಾದಲ್ಲಿ "ಪೂರಾ ಮೊಬಲಗನ್ನು" ಎಂಬ ಶಬ್ದದ ತರುವಾಯ "ಮತ್ತು ರೂಪಾಯಿ ಬಂದರೆ ಬಂದಾಣೆಯಂತೆ ಆಗುವ ಲೋಕಲ್ ಸೆಸ್ಸನ್ನು" ಎಂಬ ಶಬ್ದಗಳನ್ನು ಶೇರಿಸಿಕೊಳ್ಳಬೇಕು.

ಎಂ. ಚಂಗ್ಯಪ್ಪಗೌಡ,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1907—08ನೆ ಇಸವಿ ಮಿಸ್ಸಿ ಅರ್ಜೀ ನಂಬರು 467.

ಬೆಂಗಳೂರು ಗುಡುಮೈಯ್ಯನಪ್ಯಾಟೇಲಿದ್ದು ಮೃತಪಟ್ಟ ಪೆರ್ಪ. ಅಮಲ್‌ದಾರ್ ವೆಂಕಟರಾವ್ ಸಿಂಧೆಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಜೋತೋಜಿರಾವ್, 2ನೆ ಬಾಯಿಬಾಪಿರಾವ್, 3ನೆ ವಾಸುದೇವರಾವ್, 4ನೆ ವಿಶ್ವನಾಥರಾವ್, ಮೃತಪಟ್ಟ ವೆಂಕಟರಾವ್ ಸಿಂಧೆ ಯವರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವೆಂಕಟರಾವ್ ಸಿಂಧೆ ಯವರ ಜಿಂದಗಿ ಖಚ್ಚಾಗಿ ಖರತಕ್ಕ ರೂಪಾಯಿ 4,713—11—6 ನಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಖಚ್ಚೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾನೆ.